ಅಧ್ಯಕ್ಷರು: ಪ್ರಸಾವ ಏನೆಂದರೆ 2002ರ ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಸ್. ಎಂ. ಕೃಷ್ಣ (ಮುಖ್ಯ ಮಂತ್ರಿಗಳು) ಮಾನ್ಯ ಅಧ್ಯಕ್ಷರೇ 2002ರ ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

3. ಕರ್ನಾಟಕ ಭೂಕಂದಾಯ (ತಿದ್ದುಪಡಿ) ವಿಧೇಯಕ 2002

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ 2002ರ ಕರ್ನಾಟಕ ಭೂಕಂದಾಯ ತಿದ್ದುಪಡಿ ವಿಧೇಯಕವನ್ನು ಮಂಡಿಸಲು ಸಭೆಯ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ 2002ರ ಕರ್ನಾಟಕ ಭೂಕಂದಾಯ ತಿದ್ದುಪಡಿ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ 2002 ಕರ್ನಾಟಕ ಭೂಕಂದಾಯ ತಿದ್ದುಪಡಿ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

ಅಧ್ಯಕ್ಷರು : ಈಗ ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ.

4. ಅಧ್ಯಕ್ಷರು ಅಪ್ಪಣೆ ಮೇರೆಗೆ

(1) ಮೈಸೂರಿನಲ್ಲಿ ಕುಡಿಯುವ ನೀರಿನ ಅಭಾವ .

†**ಶ್ರೀ ಎ, ರಾಮದಾಸ್: (ಕೃಷ್ಣರಾಜ)** : ಮಾನ್ಯ ಅಧ್ಯಕ್ಷರೆ ಶೂನ್ಯ ವೇಳೆಯಲ್ಲಿ ಮೈಸೂರು ಕುಡಿಯುವ ನೀರಿನ ಬಗ್ಗೆ ನಾನು ಪ್ರಸ್ತಾಪ ಮಾಡುತ್ತೇನೆಂದು ಹೇಳಿದ್ದೆ.ತಾವು ನೋಟೀಸ್ ಕಳಿಸಿಕೊಟ್ಟಿರುತ್ತೀರಿ. ವಿಚಾರ ತೆಗೆಯಿರಿ ಅಂತ ತಾವು ಹೇಳಿದ್ದಿರಿ. ಐದು ನಿಮಿಷದೊಳಗೆ ಬಹಳ ಸಮಸ್ಯೆ ಇರುವುದನ್ನು ಪ್ರಸ್ತಾಪಮಾಡಲಿಕ್ಕೆ ಸಾಧ್ಯವಿಲ್ಲ.

M.R.SPEAKER: NO,NO,ದಯವಿಟ್ಟು ಇಲ್ಲಿ ಕೇಳಿ ಶೂನ್ಯವೇಳೆಯಲ್ಲಿ ನೀವು ಯಾವುದೇ ವಿಷಯ ಎತ್ತಿದರೆ ನಿಮಗೆ ಉತ್ತರ ಬೇಕಾದರೆ ಒಂದೆರಡು ದಿವಸ ತಡೆಯಬೇಕಾಗುತ್ತದೆ. ತಕ್ಷಣ ಎತ್ತಿಬಿಟ್ಟು ಉತ್ತರಹೇಳಿ ಅಂದರೆ ಹತ್ತಿರ ಉತ್ತರ ಎಲ್ಲಿದೆ?

ಶ್ರೀ ಎ, ರಾಮದಾಸ್ : ನನಗೆ ಉತ್ತರ ಬೇಡ. ಅದನ್ನು ಸರಿಮಾಡುತ್ತೇನೆ ಎಂದರೆ ಸಾಕು ನನಗೆ.

ಅಧ್ಯಕ್ಷರು : ಈಗ ಉತ್ತರ ಬೇಡವೆಂದು ಇನ್ನೊಂದು ದಿವಸ ಉತ್ತರ ಕೇಳಕೂಡದು.

ಶ್ರೀ ಎ, ರಾಮದಾಸ್ : ಸರ್ಕಾರಕ್ಕೆ ವಿಚಾರ ಮುಟ್ಟಿಸಿದರೆ ಸಾಕು, ಬೇರೇನೂ ಇಲ್ಲ ನನಗೆ.

ಅಧ್ಯಕ್ಷರು : ಉತ್ತರ ಬೇಡದಿದ್ದರೆ ಎತ್ತಿ, ಆದರೆ ಬಹಳ ಸಂಕ್ಷಿಪ್ತವಾಗಿ ಹೇಳಿ.

ಶ್ರೀ ಎ, ರಾಮದಾಸ್ : ಆಯಿತು ಬಹಳ ಸಂಕ್ಷಿಪ್ತವಾಗಿ ಹೇಳುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ತಮಗೆ ಧನ್ಯವಾದಗಳನ್ನು ಹೇಳುತ್ತಾ, ವಿಶೇಷವಾಗಿ ಕಳೆದ ಎರಡು ವರ್ಷಗಳ ಕಾಲದಿಂದ ಮೈಸೂರು ಮಹಾನಗರದಲ್ಲಿ ಕುಡಿಯುವ ನೀರಿನ ಅಭಾವವಾಗಿ ಬಹಳ ಸಮಸ್ಯೆಗಳನ್ನು ನಾವು ಎದುರಿಸುತಿದ್ದೇವೆ. ಕಳೆದ ವರ್ಷ ಕೂಡ ಇಂಥದೇ ಪರಿಸ್ಥಿತಿ ನಿರ್ಮಾಣವಾಗಿ ಸುಮಾರು 12 ದಿವಸಗಳ ಕಾಲ ಒಂದು ತೊಟ್ಟು ನೀರು ಕೊಡುವುದಕ್ಕೆ ಆಗದ ಪರಿಸ್ಥಿತಿ ನಿರ್ಮಾಣವಾಗಿ ಅದಕ್ಕೆ ಸಂಬಂಧಪಟ್ಟಂತೆ ದೊಡ್ಡ ಹೋರಾಟವಾಗಿ ಆವತ್ತು ನಮ್ಮೆಲ್ಲರ ಮೇಲೆ ಕ್ರಿಮಿನಲ್ ಕೇಸ್ ಹಾಕಿದ್ದು ಇನ್ನೂ ನಡೆಯುತ್ತಾ ಇದೆ. ಇದು ಒಂದು ಪರಿಸ್ಥಿತಿಯಾದರೆ ಅಧ್ಯಕ್ಷರೇ ಈ ಸಲದ ಕೆಆರ್‌ಎಸ್ ನೀರಿನ ಮಟ್ಟ ಬಹಳ ಶೋಚನೀಯವಾದ ಒಂದು ಪರಿಸ್ಥಿತಿ ಇದೆ, ಇದಕ್ಕೆ ಸಂಬಂಧಪಟ್ಟಹಾಗೆ ಮೈಸೂರು ಜಿಲ್ಲೆಯ ಜಿಲ್ಲಾ ಸಚಿವರು ಕಳೆದ ಒಂದು ತಿಂಗಳ ಹಿಂದೆ ಒಂದು ಸಭೆಯನ್ನು ಮಾಡಿ ಮೈಸೂರಲ್ಲಿ 10 ಲಕ್ಷ ಜನ ಇವತ್ತು ಕುಡಿಯುವ ನೀರಿನ ಹಾಹಾಕರದಲ್ಲಿದ್ದಾರೆ, ಇರುವಂತಹ 561 ಬೋರ್‌ವೆಲ್‌ಗಳಲ್ಲಿ 263 ಈಗಾಗಲೇ ಕೆಟ್ಟಿವೆ. ಇದಕ್ಕೆ ಸಂಬಂಧಪಟ್ಟ ಹಾಗೆ ಕುಡಿಯುವ ನೀರಿನ ಸಮಸ್ಯೆ ಬಹಳ ಎದುರಿಸುತ್ತಿದ್ದೇವೆ, ಜೊತೆಗೆ ಸುಮಾರು ನೂರು ಕುಡಿಯುವ ಬೋರ್‌ವೆಲ್‌ಗಳಲ್ಲಿನ ನೀರು ಕುಡಿಯಲು ಯೋಗ್ಯವಲ್ಲವೆಂದು ಇವತ್ತು ಪರಿಸರ ನಿಯಂತ್ರಣ ಮಂಡಲಿ ಕೊಟ್ಟಿದೆ. ಇವೆಲ್ಲ ವ್ಯವಸ್ಥೆಗಳ ಮಧ್ಯದಲ್ಲಿ ಮೈಸೂರಿನಲ್ಲಿ ಕುಡಿಯುವ ನೀರಿಗೆ ಸಮಸ್ಯೆ ಆಗುತ್ತಿರುವ ಸಂದರ್ಭದಲ್ಲಿ ಕೆಆರ್‌ಎಸ್‌ನಲ್ಲಿ ನೀರನ್ನು ಮೊದಲು ಕುಡಿಯುವುದಕ್ಕೆ ಆದ್ಯತೆ ಕೊಟ್ಟುಕೊಂಡು ಅನಂತರ ಮಾತ್ರ ನೀರನ್ನು ನೀರಾವರಿಗೆ ಬಿಡಬೇಕೆಂಬ ಚಿಂತನೆ ನಡೆಯಿತು. ಆ ವರದಿಯನ್ನು ಸನ್ಮಾನ್ಯ ಮಂತ್ರಿಗಳಿಗೂ ಕಳುಹಿಸಿಕೊಟ್ಟಿದ್ದಾರೆ. ಈ ಒಂದು ಪರಿಸ್ಥಿತಿಯೊಳಗೆ ನಿನ್ನೆ ದಿವಸ ಸಂಜೆ ಕೆ ಆರ್ ಎಸ್ ನೀರಿನ ಮಟ್ಟ 69 ಅಡಿಗೆ ಬಂದು ನಿಂತಿದೆ. ಕಳೆದ ಮೂರು ದಿವಸಗಳಿಂದ ಮೈಸೂರಿನಲ್ಲಿ ಕುಡಿಯುವ ನೀರಿಗೆ ಹಾಹಾಕಾರವಾಗಿ ಮೂರು ದಿವಸದಿಂದ ನೀರು ಕೊಡದಿರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ ಅವರೇನು ಹೇಳುತ್ತಿದ್ದಾರೆ ಅದನ್ನು ಯಾರು ಬರೆದುಕೊಳ್ಳುತ್ತಿದ್ದಾರೆ? ದಯವಿಟ್ಟು ಅದನ್ನು ಯಾರಾದರೂ ಗಮನಿಸಬೇಕಲ್ಲ.

MR. SPEAKER ; M.r. SHivkumar is incharge.

ಶ್ರೀ ಡಿ,ಬಿ, ಚಂದ್ರೇಗೌಡ : (ಕಾನೂನು ಸಂಸದೀಯ ವ್ಯವಹಾರಗಳ ಸಚಿವರು) ಇದೇನು ಸ್ವಾಮಿ, ಇದು ಯಾವುದೋ ಗೊತ್ತಾಗಲಿಲ್ಲ.

ಅಧ್ಯಕ್ಷರು : ಇದು ಶೂನ್ಯವೇಳೆಯದು. ಅವರು ಬೆಳಿಗ್ಗೆ ನೋಟೀಸ್ ಕೊಟ್ಟಿದ್ದಾರೆ.

ಶ್ರೀ ಡಿ. ಬಿ. ಚಂದ್ರೇಗೌಡ : ಸರಿ ಸ್ವಾಮಿ, ಅದೇನು ಕೊಟ್ಟಿದ್ದಾರೋ ಅದರ ನಕಲನ್ನಾದರೂ ಕೊಟ್ಟಿದ್ದರೆ ಅದೇನು ಅಂತ ನೋಡಬಹುದಿತ್ತು, ಸುಮ್ಮನೆ ಅವರು ಎತ್ತುವುದು, ನಾವು ಬರೆದುಕೊಳ್ಳುತ್ತಿಲ್ಲ ಅಂತ ಮತ್ತೆ ಹೇಳುವುದು.....

ಅಧ್ಯಕ್ಷರು: ಅವರು ಕೊಟ್ಟಿದ್ದನ್ನು ಸಂಬಂಧಪಟ್ಟ ಸಚಿವರಿಗೆ ಕಳುಹಿಸಲಾಗಿದೆ.

ಶ್ರೀ ಡಿ, ಬಿ, ಚಂದ್ರೇಗೌಡ : ....Even in The Presiding officers conferance of mumbai also held that in zero hour, only subject matter

to be brought to the house and not even to the Govt Despoite the fact,ತಾವು ಡೈರೆಕ್ಷನ್ ಕೊಡುತ್ತಾ ಇದ್ದೀರಿ, ನಾನು ಉತ್ತರ ಹೇಳುತ್ತಿದ್ದೇನೆ.

ಅಧ್ಯಕ್ಷರು : ಅವರು ಹೇಳಲಿ.

ಶ್ರೀ ಎ. ರಾಮದಾಸ್: ಸದನ ಶುರುವಾಗೋಕೆ ಒಂದು ಗಂಟೆ ಮುಂಚೆ ಮಾನ್ಯ ಸಭಾಧ್ಯಕ್ಷರಲ್ಲಿ ನಾನು ಮನವಿ ಮಾಡಿಕೊಂಡೆ,

ಶ್ರೀ ಡಿ. ಬಿ. ಚಂದ್ರೇಗೌಡ : ನನಗೆ ಸಂಬಂಧಪಟ್ಟ ಮಂತ್ರಿ ಯಾರೂ ಅಂತನಾದರೂ ಗೊತ್ತಗುವುದು ಬೇಡವೇ?

ಶ್ರೀ ಎ. ರಾಮದಾಸ್ : ಸಂಬಂಧಪಟ್ಟ ಸಚಿವರಿಗೆ ಕಳುಹಿಸಿಕೊಟ್ಟಿದ್ದಾರೆ.

ಶ್ರೀ ಡಿ . ಬಿ. ಚಂದ್ರೇಗೌಡ: ನಮಗೆ ಗೊತ್ತಿರಲಿಲ್ಲ. ಅಲಕ್ಷ್ಯ ಮಾಡಬೇಕೆಂದು ಏನೂ ಅಲ್ಲ, ಇಲಾಖೆ ಮಂತ್ರಿ ಯಾರು ಅಷ್ಟಾದರೂ ಹೇಳಿ ಸ್ವಾಮಿ ನಮಗೆ.

ಅಧ್ಯಕ್ಷರು : ಮಾನ್ಯ ಶಿವಕುಮಾರ್‌ರವರು.

Sri D.B. CHANDRE GOWDA: He will take note of it.

ಶ್ರೀ ಎ. ರಾಮದಾಸ್ : ನಿನ್ನೆ ಕೆಆರ್‌ಎಸ್‌ನಲ್ಲಿ 69 ಅಡಿಗೆ ನೀರಿನ ಮಟ್ಟ ಬಂದಿದ್ದು ಈಗ ಬಲದಂಡೆ ನಾಲೆಯಿಂದ ಪಂಪಿಂಗ್ ಏನು 18 ಎಂಜಿಡಿ ನೀರು ಪಡೆಯಬೇಕಾಗಿತ್ತೋ ಅದು ಕಳೆದೆರಡು ದಿವಸದಿಂದ ಸ್ಟಾಪಾಗಿದೆ. ಹೀಗಾಗಿ ಕೇವಲ ತುರ್ತು ಸಂದರ್ಭದಲ್ಲಿ ತೆಗೆದುಕೊಳ್ಳುವಂತಹ 8 ಎಂಜಿಡಿ ಮಾತ್ರ. 40 ಎಂಜಿಡಿ ನೀರು ಮೈಸೂರು ನಗರಕ್ಕೆ ಬೇಕಾಗಿದೆ. ಕೇವಲ 8 ಎಂಜಿಡಿ ನೀರಿನಿಂದ ಇವತ್ತು ಮೇಂಟೇನ್ ಮಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿ ಕಳೆದ ಮೂರು ದಿವಸದಿಂದ ಹಾಹಾಕಾರ ನಿರ್ಮಾಣವಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಒಂದು ತಿಂಗಳ ಹಿಂದೆ ಮಾನ್ಯ ಮಂತ್ರಿಗಳಿಗೂ ಕೂಡ ಈ ಎಮರ್ಜನ್ಸಿಗೋಸ್ಕರವಾಗಿ ಒಂದು ಕೋಟಿ ರೂಗಳಿಗೆ ಒಂದು ಮನವಿ ಕಳಿಸಿದ್ದೇವೆ ಎಂದು ನಗರಪಾಲಿಕೆ ಹೇಳಿತ್ತು, ಮೂರು ದಿವಸದಿಂದ ನೀರಿಲ್ಲ. 69 ಅಡಿಗೆ ನೀರು ನಿಂತಿದೆ. ಕುಡಿಯುವುದಕ್ಕಾಗಿ ಅದನ್ನು ಇಟ್ಟುಕೊಂಡು ಕೆಆರ್‌ಎಸ್‌ನಿಂದ ಹೊರಗಡೆ ಹೋಗುವ ನೀರನ್ನು ತಡೆಯುವ ಕೆಲಸ ತಕ್ಷಣ ಆಗಬೇಕಾಗಿದೆ. ಇನ್ನು ಎರಡು ಅಡಿ ನೀರು ಹೋದರೆ ಮೈಸೂರಲ್ಲಿ ಒಂದು ಡ್ರಾಪ್ ಕುಡಿಯಲು ನೀರಿರುವುದಿಲ್ಲ. ಈ ದೃಷ್ಟಿಯಿಂದ ಸರ್ಕಾರದ ಗಮನ ಸೆಳೆಯುತ್ತಾ ಕುಡಿಯುವ ನೀರಿಗೆ ಆದ್ಯತೆ ಕೊಟ್ಟು ಕೆಆರ್‌ಎಸ್‌ನಿಂದ ಕುಡಿಯುವುದಕ್ಕೆ ಬಿಟ್ಟು ಬೇರೆ ಯಾವುದಕ್ಕೂ ನೀರು ಬಿಡಬಾರದೆಂದು ಸರ್ಕಾರದಲ್ಲಿ ಒಂದು ಮನವಿ ನಾನು ಮಾಡುತ್ತಾ ಇದ್ದೇನೆ.

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು) : ಅಧ್ಯಕ್ಷರೇ ಏನು ನಮ್ಮ ಗೌರವಾನ್ವಿತ ಸದಸ್ಯರಾದ ರಾಮದಾಸ್‌ರವರ ಕಳಕಳಿ ಸರ್ಕಾರದ ಗಮನಕ್ಕೆ ಬಂದಿದೆ. ಈಗ ಅವರೂ ಕೂಡ ಈ ವಿಚಾರವನ್ನು ಇಲ್ಲಿ ಪ್ರಸ್ತಾವನೆ ಮಾಡುತ್ತಾ ಇದ್ದಾರೆ. ಕೆಆರ್‌ಎಸ್‌ನಲ್ಲಿ ನೀರಿನ ಮಟ್ಟ ದಿನಾ ಇಳಿಯುತ್ತಾ ಇದೆ. ಕೊಡಗಿನಲ್ಲಿ ಮಳೆಯಿಲ್ಲ. ಮಳೆರಾಯನ ಕೃಪೆ ನಿಮಗೆ ನಮಗೆಲ್ಲ ಬೇಕಾಗಿದೆ. ಆದರೆ ನಮ್ಮ ಸರ್ಕಾರ ಇಡೀ ರಾಜ್ಯದಲ್ಲಿ ನಿಮ್ಮ ಮೈಸೂರಲ್ಲಿ ಒಂದರಲ್ಲೇ ಅಲ್ಲ ಕುಡಿಯುವ ನೀರಿಗೋಸ್ಕರ ಎಷ್ಟೇ ತೊಂದರೆಯಾದರೂ ಕೂಡ ಸಮಸ್ಯೆ ಬಗೆಹರಿಸಲು ಸರ್ಕಾರ ಬದ್ದವಾಗಿದೆ. ಮೈಸೂರಿನಲ್ಲಿ ತಾವೇನು ಈಗ ಹೇಳುತ್ತಾ ಇದ್ದೀರಿ ಅದೇನು ಸ್ವಲ್ಪರಿಪೇರಿಯಾಗಬೇಕು, ನಾಲೆ ವಿಚಾರದಲ್ಲಿ, ಖಂಡಿತ ಮತ್ತೆ ನಾನು ಪ್ರತ್ಯೇಕ ತಂಡ ಒಂದನ್ನು

ಕಳುಹಿಸಿ ಅಲ್ಲೇನಾದರೂ ನೀರಿನ ಸಮಸ್ಯೆ ತೀರಾ ಆಗಿತ್ತು ಎಂದರೆ ಅದನ್ನು ಬಗೆಹರಿಸಲಿಕ್ಕೆ ಸರ್ಕಾರ ಕ್ರಮ ಕೈಗೊಳ್ಳುತ್ತದೆ.

ಅಧ್ಯಕ್ಷರು : ಆಯಿತು ಅದು ಅಲ್ಲಿಗೆ ಮುಗಿಯಿತು.

ಶ್ರೀ ಉಮೇಶ ಏ ಕತ್ತಿ : ನಾನು ಒಂದು ನೋಟೀಸ್ ಕಳುಹಿಸಿದ್ದೇನೆ.

ಅಧ್ಯಕ್ಷರು : ನೀವು ನೋಟಿಸ್ ಕಳುಹಿಸಿಲ್ಲ.

ಶ್ರೀ ಉಮೇಶ ಏ ಕತ್ತಿ : ಶೂನ್ಯ ವೇಳೆ ಅಂತ ಕಳುಹಿಸಲಿಲ್ಲ

MR. SPEAKER : You cannot expect any reply.

ಶ್ರೀ ಎ, ಆರ್, ಕೃಷ್ಣಮೂರ್ತಿ : ಅಧ್ಯಕ್ಷರೇ ನಾನೂ ಕೂಡ ಒಂದು ನೋಟಿಸ್ ಕಳಿಸಿದ್ದೆ

ಅಧ್ಯಕ್ಷರು : ಕತ್ತಿಯವರೇ ನೀವು ಈಗ ನೋಟಿಸ್ ಕಳುಹಿಸುತ್ತಿದ್ದೀರಿ,

ಶ್ರೀ ಉಮೇಶ್ ಏ ಕತ್ತಿ : ನೀರಾವರಿ ಮಂತ್ರಿಗಳು ಇಲ್ಲೇ ಇದ್ದಾರೆ.

12.40 ಪಿಎಂ

MR. SPEAKER : I am very sorry ತಾವು ಈಗ ಕಳುಹಿಸುತ್ತಿದ್ದೀರಿ. ತಕ್ಷಣ ರಿಪ್ಲೈ ಎಲ್ಲಿರುತ್ತದೆ? you must understand the different of the ministers also. ನ್ಯಾಯವಾಗಿ ಅವುರ ಬರೀ ಮೆನ್‌ಷನ್ ಮಾಡಬೇಕು ಅಷ್ಟೆ. ನಮ್ಮ ಕಾನೂನುಪ್ರಕಾರ ಮೆನ್‌ಷನ್ ಮಾಡಬೇಕು. ಮಂತ್ರಿಗಳು ಇಚ್ಛಿಪಟ್ಟರೆ ಉತ್ತರ ಹೇಳಬಹುದು. ಇಲ್ಲದಿದ್ದರೆ ಸುಮ್ಮನೆ ಇರಬಹುದು, ತಕ್ಷಣ ಕಳುಹಿಸಿಬಿಟ್ಟು ಐದು ನಿಮಿಷದಲ್ಲಿ ಉತ್ತರ ಹೇಳಬೇಕೆಂದರೆ ಹೇಗೆ ಹೇಳುವುದಕ್ಕಾಗುತ್ತದೆ? ದಯವಿಟ್ಟು ತಾವು ಕುಳಿತುಕೊಳ್ಳಿ. ನಾಳೆ ನಿಮಗೆ ನಾನು ಆಲೋ ಮಾಡುತ್ತೇನೆ.

2. **ಕೃಷ್ಣನದಿ ನೀರು ಬತ್ತಿ ಹೋಗಿರುವುದರಿಂದ ಉಂಟಾಗಿರುವ ತೊಂದರೆ.**

†**ಶ್ರೀ ಉಮೇಶ್ ಏ.ಕತ್ತಿ (ಹುಕ್ಕೇರಿ)** : ಮಾನ್ಯ ಅಧ್ಯಕ್ಷರೆ, ಕೃಷ್ಣ ನದಿ ನೀರು ಬತ್ತಿ ಹೋಗಿ ಸುಮಾರು ಒಂದು ತಿಂಗಳಾಯಿತು. ಅಲ್ಲಿ ನಾಲ್ಕು ಮುನಿಸಿಪಾಲಿಟಿಗಳು ಬರುತ್ತದೆ. ಅಲ್ಲಿ ಕುಡಿಯಲಿಕ್ಕೆ ನೀರಿಲ್ಲ. ಅದರ ಜೊತೆಗೆ ಮೂರು ಸಕ್ಕರೆ ಫ್ಯಾಕ್ಟರಿಗಳು ನೀರು ಇಲ್ಲದೆ ಬಂದೆ ಆಗುವ ಪ್ರಸಂಗ ಕೂಡ ಇದೆ. ಅಥಣಿ ತಾಲ್ಲೂಕು ಮತ್ತು ರಾಯಬಾಗ್ ತಾಲ್ಲೂಕಿನ ಕಬ್ಬು ಒಣಗಿಹೋಗುವ ಪ್ರಸಂಗ ಕೂಡ ಇದೆ. ಅದರ ಜೊತೆಗೆ ಬಂದಂಥ ಕಬ್ಬನ್ನು ನುರಿಸುವುದಕ್ಕಾಗದೆ ಅರ್ಧದಲ್ಲಿ ಬಂದು ಹೋಗುವ ಪರಿಸ್ಥಿತಿ ಇದೆ. ಆ ದಿಸೆಯಲ್ಲಿ ಮಾನ್ಯ ನೀರಾವರಿ ಮಂತ್ರಿಗಳು ನೀರನ್ನು ಬಿಡುಸುವಂಥ ಕಾರ್ಯಕ್ರಮವನ್ನು ಹಾಕಬೇಕು. ಅಲ್ಲದೆ ಕೃಷ್ಣಾ ನದಿಯಲ್ಲಿರುವ ಮೊಸಳೆಗಳು ಹಳ್ಳಿ ಮಟ್ಟಕ್ಕೂ ಬಂದು ಇವತ್ತು ಹಳ್ಳಿ ಮಟ್ಟದಲ್ಲಿ ಮನೆಗಳನ್ನು ಹೊಕ್ಕುತ್ತಿರುವುದು ಸರ್ಕಾರದ ಗಮನಕ್ಕೆ ಈಗಾಗಲೇ ಬಂದಿದೆ ಮತ್ತು ಸಂಬಂಧಪಟ್ಟ ಅಧಿಕಾರಿಗಳೂ ಕೂಡ ಹೋಗಿ ನೋಡಿಕೊಂಡು ಬಂದಿದ್ದಾರೆ. ಕಳೆದ 50 ವರ್ಷದಲ್ಲಿ ಕೃಷ್ಣಾ ನದಿ ಬತ್ತಿ ಹೋಗುವ ಪ್ರಸಂಗ ಇದುವರೆಗೂ ಬೆಳಗಾಂ ಜಿಲ್ಲೆಗೆ ಬಂದಿರಲಿಲ್ಲ. ಪ್ರಥಮಬಾರಿಗೆ ಇವತ್ತು ಕೃಷ್ಣಾ ನದಿ ಬತ್ತಿಹೋಗಿ ಸುಮಾರು 15 ರಿಂದ 20 ಲಕ್ಷ ಟನ್ ಕಬ್ಬು ಸುರಿಸದೆ ಒಣಗಿಹೋಗುವ ಪ್ರಸಂಗ ಇವತ್ತು ಬಂದಿದೆ. ಅದರ ಜೊತೆಗೆ ಮುಂದಿನ ವರ್ಷ ಬರುವಂಥ ಕಬ್ಬಿಗೂ ಸಹಾ ನೀರಿಲ್ಲದೆ ಒಣಗಿಹೋಗುವ ಪ್ರಸಂಗ ಕೂಡ ಇದೆ. ಚಿಕ್ಕೋಡಿ, ಅಥಣಿ, ಕುಡಚಿ ಮತ್ತು ರಾಯಭಾಗ್